# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 960 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 14-03-2025 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಹಿಳಾ ಉದ್ಯೋಗ ಮತ್ತು ಸ್ವಾವಲಂಬನೆಗೆ (Self Employment) ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಜಾರಿಗೆ ಬಂದ ಯೋಜನೆಗಳು ಯಾವುವು; ಈ ಯೋಜನೆಗಳ ಪ್ರಗತಿ ಯಾವ ಹಂತದಲ್ಲಿವೆ; | ಮಹಿಳೆಯರ ಸ್ವಾವಲಂಬನೆಗಾಗಿ ಈ ಕೆಳಕಂಡ ಯೋಜನೆಗಳನ್ನುಅನುಷ್ಠಾನಗೊಳಿಸಲಾಗುತ್ತಿದೆ:<br>1. ಸ್ತ್ರೀಶಕ್ತಿ ಯೋಜನೆ<br>2. ಗೃಹಲಕ್ಷ್ಮಿ ಯೋಜನೆ<br>3. ಉದ್ಯೋಗಿನಿ<br>4. ಚೇತನ<br>5. ಧನಶ್ರೀ<br>6. ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ<br>7. ಮಾಜಿ ದೇವದಾಸಿ ಮಹಿಳೆಯರ ಪುನರ್ವಸತಿ (15 ಜಿಲ್ಲೆಗಳಲ್ಲಿ)<br>8. ಮಹಿಳಾ ತರಬೇತಿ<br>ಪ್ರಸ್ತುತ ಸದರಿ ಯೋಜನೆಗಳು ಚಾಲ್ತಿಯಲ್ಲಿರುತ್ತವೆ. |
| ಆ) | ವಿಜಯಪುರದಲ್ಲಿ ಮಹಿಳಾ ಸಹಾಯ ಕೇಂದ್ರ (One Stop Center) ಕಾರ್ಯನಿರ್ವಹಿಸುತ್ತಿದೆಯೇ; ಇದುವರೆಗೆ ಎಷ್ಟು ಪ್ರಕರಣಗಳು ದಾಖಲಾಗಿವೆ; ಈ ಪೈಕಿ ಎಷ್ಟು ಪ್ರಕರಣಗಳಿಗೆ ನೆರವು ನೀಡಲಾಗಿದೆ; | ಹೌದು, ವಿಜಯಪುರದಲ್ಲಿ ಒನ್‌ಸ್ಟಾಪ್ ಸೆಂಟರ್ (OSC) ಕಾರ್ಯನಿರ್ವಹಿಸುತ್ತಿದೆ.<br>ಸದರಿ ಕೇಂದ್ರದಲ್ಲಿ ದಾಖಲಾಗಿರುವ ಪ್ರಕರಣಗಳ ಹಾಗೂ ಸೌಲಭ್ಯ/ನೆರವು ನೀಡಿರುವ ಪ್ರಕರಣಗಳ ವಿವರ ಕೆಳಗಿನಂತಿದೆ : (see table below) |
| ಇ) | ಜಿಲ್ಲೆಯಲ್ಲಿ ಮಹಿಳಾ ಆತ್ಮಸಂಭ್ರಮ ಮತ್ತು ಸ್ವಯಂ ಸಹಾಯ ಸಂಘಗಳ (SHG) ಕಾರ್ಯನಿರ್ವಹಣೆಗೆ ಸರ್ಕಾರದಿಂದ ಎಷ್ಟು ವಿಶೇಷ ಅನುದಾನ ಒದಗಿಸಲಾಗಿದೆ; | ಪ್ರಸಕ್ತ ಆರ್ಥಿಕ ವರ್ಷದಲ್ಲಿ ಯಾವುದೇ ಸ್ವಯಂ ಸಹಾಯ ಸಂಘಗಳ (SHG) ಕಾರ್ಯನಿರ್ವಹಣೆಗೆ ಸರ್ಕಾರದಿಂದ ವಿಶೇಷ ಅನುದಾನ ಒದಗಿಸಲಾಗಿರುವುದಿಲ್ಲ. |

| ಕ್ರ. ಸಂ. | ವರ್ಷ | ದಾಖಲಾದ ಮಹಿಳೆಯರ ಸಂಖ್ಯೆ | ನೆರವು ನೀಡಲಾದ ಮಹಿಳೆಯರ ಸಂಖ್ಯೆ |
|---|---|---|---|
| 1 | 2019-20 | 10 | 10 |
| 2 | 2020-21 | 13 | 13 |
| 3 | 2021-22 | 27 | 27 |
| 4 | 2022-23 | 178 | 178 |
| 5 | 2023-24 | 205 | 205 |
| 6 | 2024-25 | 235 | 235 |

| | | |
|---|---|---|
| ಈ) | ಗೃಹ ಹಿಂಸೆ ಪೀಡಿತ ಮಹಿಳೆಯರಿಗೆ ಆಶ್ರಯ ಮತ್ತು ಪುನರ್ವಸತಿ ನೀಡಲು ಜಿಲ್ಲೆಯಲ್ಲಿ ಎಷ್ಟು ಕೇಂದ್ರಗಳಿವೆ; ಮಹಿಳಾ ಭದ್ರತಾ ಮೇಲ್ವಿಚಾರಣಾ ಸಮಿತಿ (Women's Safety Monitoring Committee) ವಿಜಯಪರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದೆಯೇ; (ವಿವರ ನೀಡುವುದು) | ಕೌಟುಂಬಿಕ ಹಿಂಸೆಗೆ ಒಳಪಟ್ಟ ಸಂತ್ರಸ್ಥ ಮಹಿಳೆಯರಿಗೆ ತಾತ್ಕಾಲಿಕ ಆಶ್ರಯ ಮತ್ತು ಪುನರ್ ವಸತಿ ನೀಡಲು ವಿಜಯಪುರ ಜಿಲ್ಲೆಯಲ್ಲಿ ಒಂದು ಸ್ವಾಧಾರ ಗೃಹ ಕೇಂದ್ರ ಕಾರ್ಯನಿರ್ವಹಿಸುತ್ತಿದೆ.<br>ಮಹಿಳೆಯರ ಅಭಿವೃದ್ಧಿಗಾಗಿ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಅಧಿನಿಯಮ 2005, ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆಯನ್ನು ತಡೆಗಟ್ಟುವಿಕೆ, ರಕ್ಷಣೆ ಮತ್ತು ಪುನರ್ವಸತಿ, ಕೇಂದ್ರ ಪುರಸ್ಕೃತ ಮಿಷನ್ ಶಕ್ತಿ ಸಾಂತ್ವನ ಯೋಜನೆ ಮತ್ತು ಸ್ತ್ರೀಶಕ್ತಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಏಕೀಕೃತ ಸಮಿತಿಯನ್ನು ರಚಿಸಲಾಗಿದೆ. |
| ಉ) | ಗ್ರಾಮೀಣ ಭಾಗದ ಮಹಿಳಾ ಉದ್ಯಮಶೀಲತೆ ಅಭಿವೃದ್ಧಿಗಾಗಿ (Enterpreneurship Development) ಸರ್ಕಾರವು ವಿಶೇಷ ಯೋಜನೆಗಳನ್ನು ರೂಪಿಸಿರುವುದೇ? | ಪ್ರಸ್ತುತ ಯಾವುದೇ ವಿಶೇಷ ಯೋಜನೆಯನ್ನು ರೂಪಿಸಿರುವುದಿಲ್ಲ. |

ಸಂಖ್ಯೆ:ಮಮಇ/19/ಮಅನಿ/2025

(ಲಕ್ಷ್ಮೀ ಆರ್. ಹೆಬ್ಬಾಳ್ಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಸಚಿವರು